ಗೊತ್ತಾಗದಿದ್ದರೆ ಹೇಗೆ? ಬೇಡ, ಬೇಡ. ಇಪ್ಪತ್ತು ಮೀಟರಿಗಿಂತ ಕೆಳಗೆ ಹೋಗೋದೇ ಬೇಡ" ಎಂದರೂ ಕೇಳಲಿಲ್ಲ. "ದಾರಿ ಗೊತ್ತಾಗದಿದ್ದರೆ ನೇರವಾಗಿ ಮೇಲಕ್ಕೇ ಬಂದುಬಿಡುವುದು. ಹೆದರಬೇಡ ಬಾ" ಎಂದು ಕರೆದುಕೊಂಡು ಹೋಗೇಬಿಟ್ಟಳು.

ಸುಮಾರು ಮೂವತ್ತು ಮೀಟರಿನ ಕೆಳಗೆ ಕಾಣಿಸಿತು ಆ ಗುಹೆ. ಮುಂಜಾನೆಯಾದ್ದರಿಂದ ಬೆಳಕು ಅಷ್ಟಿರಲಿಲ್ಲ, ಮಬ್ಬು ಮಬ್ಬು. ಎಸ್ಟೆಲ್ಲಾ ಫ್ಲ್ಯಾಶ್ ಲೈಟ್ ಬಿಟ್ಟು ನೋಡಿದಳು. ಈ ಸಲ ಅಂಥ ಮೂರು ಆಕೃತಿಗಳು ಕಂಡವು! ಮನುಷ್ಯರಿಗಿರುವಂತೆಯೇ ಕೈಕಾಲುಗಳಿದ್ದವು. ಒಬ್ಬರಿಗೊಬ್ಬರು ಏನೇನೋ ಮಾತಾಡಿಕೊಳ್ಳುತ್ತಿದ್ದವು. ಇವರ ಡೈವ್ ಸಾಧನದ ಸಪ್ಪಳದಲ್ಲಿ ಅವರ ಮಾತು ಕೇಳಿಸುತ್ತಿರಲಿಲ್ಲ. ಇವು ಪ್ರಾಣಿಗಳಂತೂ ಅಲ್ಲ, ಮನುಷ್ಯರೇ. ಇಷ್ಟು ಆಳದಲ್ಲಿದ್ದಾರಲ್ಲಾ, ಅದೂ ಆಮ್ಲಜನಕ ಇಲ್ಲದೆ?! ಇಬ್ಬರಿಗೂ ವಿಸ್ಮಯ!

ತಮ್ಮ ವಾಯುಕೊಳವೆಗಳೊಳಗಿನ ಆಮ್ಲಜನಕ ಕಡಿಮೆಯಾಗಿದೆಯೇನೋ ಎಂಬ ಭ್ರಮೆ ಉಂಟಾಯಿತು ಎಸ್ಟೆಲ್ಲಾಳಿಗೆ. ಇಬ್ಬರೂ ಕೊಳವೆಗಳನ್ನು ಚೆಕ್ ಮಾಡಿಕೊಂಡರು, ಸರಿಯಾಗೇ ಇತ್ತು. ಆದರೂ ಸಮಾಧಾನವಾಗಲಿಲ್ಲ. ಬೇರೆ ಏನಾದರೂ ದೋಷ ಉಂಟಾಗಿರಬಹುದೆಂದು ಅನುಮಾನ ಉಂಟಾಗತೊಡಗಿತು.

ಅದೇ ಸಮಯದಲ್ಲಿ ಅದೇ ಮಾದರಿಯ ಚಿಕ್ಕ ಗಾತ್ರದ ಪ್ರಾಣಿ ಕಾಣಿಸಿತು. ಕುತೂಹಲದಿಂದ ಅದರ ಸಮೀಪಕ್ಕೆ ಹೊರಟೇಬಿಟ್ಟಳು ಎಸ್ಟೆಲ್ಲಾ. ಯಾವುದೇ ಪ್ರಾಣಿ ತನ್ನ ಹಸುಳೆಗಳ ಸಮೀಪ ಯಾರಾದರೂ ಬರುವುದನ್ನು ಸಹಿಸದು. ಈ ವಿಷಯ ಗೊತ್ತಿತ್ತು ಮಿಮಿಗೆ. ಎಸ್ಟೆಲ್ಲಾಗೆ ಎಚ್ಚರಿಕೆ ನೀಡಬೇಕೆಂದು ಧಾವಿಸಿದಳು. ಸಮೀಪ ಹೋಗಿ ನೋಡಿದರೆ ಎಸ್ಟೆಲ್ಲಾಳ ವಾಯುಕೊಳವೆ ಸಡಿಲುಗೊಂಡಿದೆ! ದೊಡ್ಡದೊಂದು ವಾಯುಗುಳ್ಳೆ ಅದರಿಂದ ಬಂದು ಮೇಲಕ್ಕೆ ಹೊರಟುಹೋಯಿತು! ಮರಿಪ್ರಾಣಿಯ ಬೆನ್ನುಹತ್ತಿದ ಭರದಲ್ಲಿ ಈ ವಿಷಯ ಎಸ್ಟೆಲ್ಲಾಳ ಗಮನಕ್ಕೆ ಬಂದಿರಲಿಲ್ಲ. ಮಿಮಿ ಹೇಳಿದಾಗಲೇ ಗೊತ್ತಾದದ್ದು ಎಸ್ಟೆಲ್ಲಾಳಿಗೆ.

ಈಗೇನು ಮಾಡುವುದು?

ಇಷ್ಟು ಆಳದಿಂದ ಮೇಲ್ಮೈ ಮುಟ್ಟುವುದಕ್ಕೆ ಹೆಚ್ಚು ಸಮಯ ಹಿಡಿಯುತ್ತದೆ. ರಕ್ತದಲ್ಲಿ ಬೆರೆತ ನೈಟ್ರೋಜನ್ ಗುಳ್ಳೆರೂಪದಲ್ಲಿ ಹೊರಬರತೊಡಗಿದರೆ ಪ್ರಾಣಕ್ಕೆ ಅಪಾಯ! ಹಾಗಂತ ವಿಲ್ಲೀ ವಾರ್ನಿಂಗ್ ಕೊಟ್ಟಿದ್ದ. ಈಗಿರುವ ದಾರಿ ಒಂದೇ–ಆದಷ್ಟು ಬೇಗ ಲೈಫ್ ಲೈನ್ ಹುಡುಕಿ ಸಹಾಯಕ್ಕಾಗಿ ಲೈಫ್ ಗಾರ್ಡ್ಸ್ ಕರೆಯಬೇಕು.

ಧಾವಿಸಿದಳು ಮಿಮಿ. ಲೈಫ್ ಲೈನ್ ಸಿಕ್ಕಿದ್ದೇ ತಡ, ಮೂರು ಸಲ ಜೋರಾಗಿ ಜಗ್ಗಿದಳು. ಐದು ನಿಮಿಷಗಳಲ್ಲಿ ಗಾರ್ಡ್ಸ್ ಬಂದೇಬಿಟ್ಟರು. ಆ ಐದು ನಿಮಿಷಗಳು ಎಸ್ಟೆಲ್ಲಾಳಿಗೆ ಸುದೀರ್ಘವೆನಿಸಿದವು. ವಾಯುಕೊಳವೆಗಳನ್ನು ಅವರು ಸರಿಯಾಗಿ ಮುಖಗವಚಕ್ಕೆ ಜೋಡಿಸಿ ಭದ್ರವಾಗಿ ಕಟ್ಟಿದರು. ಎಲ್ಲರೂ ನಿಟ್ಟುಸಿರುಬಿಟ್ಟರು.

ವಿಲ್ಲೀ ತಮ್ಮನ್ನು ಚೆನ್ನಾಗಿ ಬಯ್ಯಬಹುದು ಎಂದು ಇಬ್ಬರಿಗೂ ಗೊತ್ತಿತ್ತು. ಆದರೆ ಸುರಕ್ಷಿತವಾಗಿ ಮೇಲ್ಮೈ ತಲುಪಿದ ಸಂತೋಷದ ಮುಂದೆ ಅವನ ಬೈಗುಳಗಳದೇನು ಲೆಕ್ಕ? ಕೋರ್ಸ್ ಬಿಡಿಸಿ ಕಳಿಸಲೂಬಹುದು!

ವಿಲ್ಲೀ ಬರುವ ಸಮಯಕ್ಕಾಗಿ ಕಾಯುತ್ತ ಉಪಹಾರಗೃಹದಲ್ಲಿ ಕುಳಿತರು.

ವಿಲ್ಲೀ ಕಾಣಿಸಿದ. ಈಜುತ್ತ ಬರುತ್ತಿದ್ದ. ಎಸ್ಟೆಲ್ಲಾ ದೂರದೃಷ್ಟಿಯಿಂದ ಉದ್ಗಾರದ ಮಾತೊಂದನ್ನು ಹರಿಸಿದಳು–"ಕೆಲವರು ಹುಟ್ಟಿನಿಂದಲೇ ಭಾಗ್ಯವಂತರು! ನಾವು ಕೆಲಸಕ್ಕಾಗಿ,